# ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮೈಸೂರು. ಬ್ಯಾಂಕಿನ ಸಂಕ್ಷಿಪ್ತ ಪಕ್ಷಿನೋಟ

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು 15-02-1955 ರಲ್ಲಿ ಕೆ.ಎಸ್.ಸಿ.ಎಸ್. ಆಕ್ಟ್ 1959 ರಂತೆ ನಂ.ಎ.ಆರ್.ಎಂ.1080 ರಲ್ಲಿ ನೊಂದಣಿಯಾಗಿರುತ್ತದೆ. ಹಾಗೂ ಬ್ಯಾಂಕಿನ ಕಾರ್ಯ ವ್ಯಾಪ್ತಿಯು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗೆ ಸೀಮಿತವಾಗಿರುತ್ತದೆ. ಮೈಸೂರು ಜಿಲ್ಲೆಯಲ್ಲಿ 7 ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 4 ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ.

ಬ್ಯಾಂಕು 2007-08 ನೆ ಸಾಲಿಗೆ ಒಟ್ಟು 1176-00 ವಿವಿಧ ಸಹಕಾರ ಸಂಘಗಳ ಸದಸ್ಯತ್ವವನ್ನು ಹೊಂದಿದ್ದು ರೂ. 1131.59 ಲಕ್ಷಗಳ ಪಾಲು ಬಂಡವಾಳವನ್ನು ಹೊಂದಿರುತ್ತದೆ. ಈ ಪೈಕಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಒಟ್ಟು 274 ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕುಗಳು ಸದಸ್ಯತ್ವವನ್ನು ಪಡೆದಿರುತ್ತದೆ. 2008-09 ನೇ ಸಾಲಿಗೆ ಒಟ್ಟು 1400 ಸಹಕಾರ ಸಂಘಗಳನ್ನು ಸದಸ್ಯರಾಗಿ ನೊಂದಾಯಿಸಿ ರೂ.1264-00 ಲಕ್ಷಗಳ ಪಾಲು ಬಂಡವಾಳವನ್ನು ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದೆ. ಈ ನಿಟ್ಟಿನಲ್ಲಿ 30-09-2008 ರ ಅಂತ್ಯಕ್ಕೆ ಒಟ್ಟು 1181 ಸದಸ್ಯರಿಂದ 1190-23 ಲಕ್ಷಗಳ ಪಾಲು ಬಂಡವಾಳ ಸಂಗ್ರಹಿಸಲಾಗಿದೆ.

ಬ್ಯಾಂಕು 1955 ರಲ್ಲಿ ಪ್ರಾರಂಭವಾಗಿ ಅವಿರತವಾಗಿ ಪ್ರಗತಿ ಪಥದಲ್ಲಿ ಸಾಗುತ್ತಿದ್ದು ತನ್ನ 53 ವರ್ಷಗಳ ಸೇವೆಯನ್ನು ಪೂರೈಸಿರುತ್ತದೆ. ಎರಡೂ ಜಿಲ್ಲೆಯ ರೈತಬಾಂಧವರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಬಂದಿರುತ್ತದೆ. ಎರಡು ಜಿಲ್ಲೆಯ ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕುಗಳ ಮುಖಾಂತರ ರೈತರ ಅಲ್ಪಾವದಿ ಮತ್ತು ಮದ್ಯಮಾವದಿ ಕೃಷಿ ಸಾಲಗಳ ಅವಶ್ಯಕತೆಗಳನ್ನು ಪೂರೈಸುತ್ತಿದೆ, ಅಲ್ಲದೆ ತನ್ನ ಸದಸ್ಯ ಸಹಕಾರ ಸಂಘಗಳ ಸಾಲದ ಅವಶ್ಯಕತೆಗಳಿಗನುಗುಣವಾಗಿ ಸಾಲ ಸೌಲಭ್ಯವನ್ನು ನೀಡಲಾಗುತ್ತಿದೆ. ಕಾರ್ಯ ವ್ಯಾಪ್ತಿಯು ಎರಡು ಜಿಲ್ಲೆಯ ರೈತರಿಗೆ ಕೃಷಿಸಾಲಗಳಲ್ಲದೇ, ಕೃಷಿಯೇತರ ಸಾಲಗಳನ್ನು ಕೂಡ ನೀಡಲಾಗುತ್ತಿದೆ.

## ಜಿಲ್ಲೆಯ ಪ್ರಮುಖ ಬೆಳೆಗಳು:-

ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ ನೀರಾವರಿ ಮತ್ತು ಒಣ ಬೇಸಾಯದ ಪ್ರದೇಶಗಳನ್ನೊಳಗೊಂಡಿದ್ದು, ಭತ್ತ, ಕಬ್ಬು, ಅರಿಶಿಣ, ಶುಂಠಿ, ತಂಬಾಕು, ರೇಷ್ಮೆ, ಕಡಲೇಕಾಯಿ, ಜೋಳ, ರಾಗಿ ,ಸುಗಂಧರಾಜ, ಚೆಂಡುಮಲ್ಲಿಗೆ, ಕನಕಾಂಬರ, ಮೆಕ್ಕೆಜೋಳ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ.

## ಇತರೆ ಚಟುವಟಿಕೆಗಳು:-

ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿರುವ ರೈತರು ಮತ್ತು ಕುಶಲಕರ್ಮಿಗಳು ತಮ್ಮ ಜೀವನೋಪಾಯಕ್ಕಾಗಿ ರೇಷ್ಮೆನೂಲು ಬಿಚ್ಚುವುದು, ಚಮ್ಮಾರಿಕೆ, ಮರಗೆಲಸ, ಕರಕುಶಲವಸ್ತುಗಳ ತಯಾರಿಕೆ ಹಾಗೂ ಇತರೆ ಗುಡಿಕೈಗಾರಿಕೆಯಲ್ಲಿ ತೊಡಗಿರುತ್ತಾರೆ. ಈ ವರ್ಗದ ಜನರ ಏಳಿಗೆಗಾಗಿ ಬ್ಯಾಂಕು ಸ್ವ-ಸಹಾಯ ಸಂಘಗಳ ಮುಖಾಂತರ ವಿವಿಧ ರೀತಿಯ ಸಾಲ ಸೌಲಭ್ಯವನ್ನು ನೀಡುತ್ತಿದೆ.

## ಸ್ವ-ಸಹಾಯ ಸಂಘಗಳು :-

ಬ್ಯಾಂಕಿನ ಮುಂದಾಳತ್ವದಲ್ಲಿ ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ ಒಟ್ಟು. 5794 ಸ್ವ-ಸಹಾಯಸಂಘಗಳನ್ನು ರಚಿಸಿದ್ದು ರೂ. 448.09 ಲಕ್ಷ ರೂಪಾಯಿಗಳ ಉಳಿತಾಯ ಮಾಡಿದ್ದು ಒಟ್ಟು ರೂ.2459.39 ಲಕ್ಷಗಳ ಸಾಲನೀಡಲಾಗಿದೆ. ಈ ಪೈಕಿ 1064 ಗುಂಪುಗಳ ಜೋಡಣೆ ಮಾಡಿದ್ದು ಸ್ವ-ಸಹಾಯ ಗುಂಪುಗಳ ಸದಸ್ಯರ ಆರ್ಥಿಕ ಅಭಿವೃದ್ಧಿಗಾಗಿ ಮದ್ಯಮಾವದಿ ಸಾಲಗಳನ್ನು ಕೂಡಾ ನೀಡಲಾಗಿದೆ. 2008-09 ನೇ ಸಾಲಿನಲ್ಲಿ 500 ಸ್ವಸಹಾಯ ಸಂಘಗಳನ್ನು ರಚಿಸಲು ಗುರಿ ಹೊಂದಲಾಗಿದೆ ಮತ್ತು 1000 ಸ್ವಸಹಾಯ ಸಂಘಗಳನ್ನು ಜೋಡಣೆಗೆ ಒಳಪಡಿಸುವ ಗುರಿ ಹೊಂದಲಾಗಿದೆ. ಈ ನಿಟ್ಟಿನಲ್ಲಿ 30-09-2008 ರ ಅಂತ್ಯಕ್ಕೆ ಒಟ್ಟು 79 ಸ್ವಸಹಾಯ ಸಂಘಗಳನ್ನು ರಚಿಸಿ 150 ಸ್ವಸಹಾಯ ಸಂಘಗಳನ್ನು ಜೋಡಣೆಮಾಡಲಾಗುತ್ತಿದೆ.

## ರೈತಕೂಟಗಳು:-

ಬ್ಯಾಂಕು ಮತ್ತು ರೈತ ಸದಸ್ಯರ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ನಬಾರ್ಡ್ ಸಂಸ್ಥೆಯ ಸಂಯೋಜನೆಯೊಂದಿಗೆ ನಿಷ್ಠಾವಂತ ಮತ್ತು ಸಾಮಾಜಿಕ ಕಳಕಳಿಯುಳ್ಳ ಗ್ರಾಮೀಣ ಜನರನ್ನು ಬಳಸಿಕೊಂಡು ಸಾಲದ ಸದುಪಯೋಗ ಮತ್ತು ಕ್ರಮವಾಗಿ ಮರುಪಾವತಿಗಾಗಿ ರೈತರ ಮಾರ್ಗದರ್ಶನಕ್ಕಾಗಿ ಕ್ರಮವಿಡಲಾಗಿದೆ.

## ಯಶಸ್ವಿನಿ ಯೋಜನೆ:-

2008-09 ನೇ ಸಾಲಿಗೆ ಬ್ಯಾಂಕಿನ ವತಿಯಿಂದ ಒಟ್ಟು. 75820 ಜನ ರೈತ ಸದಸ್ಯರನ್ನು ನೊಂದಾಯಿಸಲಾಗಿದೆ, 2009-10 ನೇ ಸಾಲಿಗೆ ಬ್ಯಾಂಕಿನವತಿಯಿಂದ ಪ್ರಾಥಮಿಕ ಪತ್ತಿನ ಸಹಕಾರ ಬ್ಯಾಂಕುಗಳ ಮುಖಾಂತರ ಒಟ್ಟು 83289 ನೊಂದಾಯಿಸಲಾಗಿದೆ, ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕುಗಳ ಮುಖಾಂತರ ನೊಂದಾಯಿಸಿರುವ ಸದಸ್ಯರಿಗೆ ಬ್ಯಾಂಕಿನವತಿಯಿಂದ ಪ್ರತಿ ಸದಸ್ಯರಿಗೆ ರೂ. 30.00 ರಂತೆ ಸಹಾಯಧನವನ್ನು ನೀಡಲಾಗುತ್ತಿದೆ.

ಮುಂದಿನಸಾಲಿನಲ್ಲಿ ಬ್ಯಾಂಕು ಪ್ರಗತಿ ಹೊಂದಲು ಅನುಕೂಲವಾಗುವಂತೆ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿದೆ.

1) ವ್ಯವಸಾಯ ಸಾಲಗಳನ್ನು ಶೇ. 30 % ಹೆಚ್ಚಿಸುವುದು.
2) ವ್ಯವಸಾಯ ಸಾಲಗಳನ್ನು ಗುಣಾತ್ಮಕವಾಗಿ ನೀಡಲು ಕ್ರಮವಿಡುವುದು.
3) ಅನುತ್ಪಾದಕ ಆಸ್ತಿಯನ್ನು ಶೇ 10 % ಒಳಗಿರುವಂತೆ ಕ್ರಮವಿಡುವುದು.
4) ಬ್ಯಾಂಕಿನ ಇತರೆ ಆದಾಯಗಳನ್ನು ಕನಿಷ್ಠ ಒಟ್ಟು ಆದಾಯ ಶೇ.5 % ಕ್ಕೆ ಹೆಚ್ಚಿಸಲು ಕ್ರಮವಿಡುವುದು.
5) ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸುವುದು.
6) ಬ್ಯಾಂಕಿನ ನೌಕರರಿಗೆ ಹೆಚ್ಚಿನ ಮಟ್ಟದಲ್ಲಿ ಅಗತ್ಯ ತರಬೇತಿ ನೀಡುವುದು.
7) ಬ್ಯಾಂಕಿನಿಂದ ಕೃಷಿಯೇತರ ಸಾಲಗಳನ್ನು ನೀಡುವುದು ಮತ್ತು ಗೃಹ ನಿರ್ಮಾಣ ಸಾಲಗಳನ್ನು ನೀಡಲು ಕ್ರಮವಿಡುವುದು.

**1) ನೊಂದಣಿ ಸಂಖ್ಯೆ:-**ಬ್ಯಾಂಕಿನ ನೊಂದಣಿ ಸಂಖ್ಯೆ 1080 /ಎ. ಆರ್. ಎಂ. ದಿನಾಂಕ: 15-02-1955 ನೊಂದಣಿ ದೃಡೀಕರಣ ಪತ್ರ ಪಡೆಯಲಾಗಿದೆ ಹಾಗೂ 15-02-1955 ರಿಂದಲೂ ಕಾರ್ಯನಿರ್ವಹಿಸುತ್ತಿದೆ.

**2)ಬ್ಯಾಂಕಿನ ಕಾರ್ಯ ವ್ಯಾಪ್ತಿ:-**ಬ್ಯಾಂಕಿನ ಬೈಲಾ ಸಂಖ್ಯೆ 3 ರ ರೀತ್ಯಾ ಬ್ಯಾಂಕ್ ನ ಕಾರ್ಯ ಕ್ಷೇತ್ರವು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗೆ ಸೀಮಿತವಾಗಿರುತ್ತದೆ.

**3)** ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಪ್ರಧಾನ ಕಛೇರಿ ಮೈಸೂರು ಹಾಗು ಹೊಂದಿರುವ ಒಟ್ಟು ಶಾಖೆಗಳು 15 ಈ ಪೈಕಿ 11 ಶಾಖೆಗಳು ತಾಲ್ಲೋಕು ಮಟ್ಟದಲ್ಲಿಯೂ 4 ಶಾಖೆಗಳು ಗ್ರಾಮೀಣ ಪ್ರದೇಶದಲ್ಲಿಯೂ ಇರುತ್ತದೆ. ಮೈಸೂರು ನಗರ ಶಾಖೆ, ಚುಂಚನಕಟ್ಟೆ, ಹನೂರು, ಹೆಗ್ಗಡದೇವನಕೋಟೆ ಶಾಖೆಗಳನ್ನು ಹೊರತುಪಡಿಸಿ ಉಳಿದ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

**4) ಬ್ಯಾಂಕಿನ ಆಡಳಿತ ಮಂಡಳಿ:-**ಬ್ಯಾಂಕಿನ ಆಡಳಿತ ಮಂಡಳಿಗೆ 2008-09 ರಿಂದ 2012-13 ರ 5 ಸಹಕಾರ ವರ್ಷಗಳ ಅವಧಿಗೆ ದಿನಾಂಕ: 16-03-2008 ರಂದು ನಡೆದಿರುತ್ತದೆ. ಬ್ಯಾಂಕಿನಲ್ಲಿ ಚುನಾಯಿತ ಆಡಳಿತ ಮಂಡಳಿಯು ಕಾರ್ಯನಿರ್ವಹಿಸುತ್ತಿದ್ದು ಪ್ರತಿ 2.5 (ಎರಡುವರೆವರ್ಷ) ವರ್ಷಗಳಿಗೊಮ್ಮೆ ಪದಾದಿಕಾರಿಗಳ ಆಯ್ಕೆ ನಡೆಯುತ್ತಿದೆ.

**5) ಬ್ಯಾಂಕಿನ ಅದ್ಯಕ್ಷರು / ಉಪಾದ್ಯಕ್ಷರು:-**ಬ್ಯಾಂಕಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯು ದಿನಾಂಕ: 24.03.2008 ರಂದು ನಡೆದು, ಶ್ರೀ ಸಿ. ಬಸವೇಗೌಡರು ಅಧ್ಯಕ್ಷರಾಗಿಯೂ ಮತ್ತು ಶ್ರೀ. ಎಸ್.ಸಿದ್ದೇಗೌಡರು ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**6) ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಇಲಾಖೆ ಅಧಿಕಾರಿಗಳು:-**ಬ್ಯಾಂಕಿನಲ್ಲಿ ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳ ಜಂಟಿನಿಬಂಧಕರ ದರ್ಜೆಯ ಶ್ರೀ. ಎಸ್.ಎಸ್. ಮಹೇಂದ್ರ ರವರು ದಿನಾಂಕ:01-09-2007ರಿಂದ ಎರವಲು ಸೇವೆಮೇರೆಗೆ ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿಸುತ್ತಿದ್ದಾರೆ.

ಶ್ರೀ. ವರದೇಗೌಡ, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇವರು ಬ್ಯಾಂಕಿನಲ್ಲಿ ನಿಯಮ 441 ರ ವಸೂಲಾತಿ ಅಧಿಕಾರಿಯಾಗಿರುತ್ತಾರೆ.

ಶ್ರೀ. ತಿಮ್ಮಸಿದ್ದಯ್ಯ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು ನಿಯಮ 441 ರವರು ಬ್ಯಾಂಕಿನಲ್ಲಿ ಲೆಕ್ಕಪರಿಶೋಧನಾ ಅಧಿಕಾರಿಯಾಗಿರುತ್ತಾರೆ.

**7)ಅಪದ್ದನ ಹಾಗೂ ಇತರೆ ನಿದಿಗಳು:-**

ರೂ. ಲಕ್ಷಗಳಲ್ಲಿ

| ವಿವರಗಳು | 30-09-2008 ಕ್ಕೆ ಮೊಬಲಗು |
|---|---|
| ಅಪದ್ಧನ ನಿಧಿ | 448.21 |
| ಕೃಷಿ ಸಾಲ ಸ್ಥಿರೀಕರಣ ನಿಧಿ | 188.29 |
| ಕಟ್ಟಡ ನಿಧಿ | 240.62 |
| ಕರಡು ಮತ್ತು ಸಂಶಯಾಸ್ಪದ ಸಾಲದ ನಿಧಿ | 86.29 |
| ಅನುತ್ಪಾದಕ ಆಸ್ತಿಗಾಗಿ ಮೀಸಲು ನಿಧಿ | 1958.31 |
| ಇತರೆ ನಿಧಿಗಳು | 530.02 |
| **ಜುಮ್ಲಾ** | **3451.74** |

- ಅಪದ್ದನ ನಿಧಿಯನ್ನು ಪೂರ್ಣವಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ಠೇವಣಿ ಮಾಡಲಾಗಿದೆ.
- ಕೃಷಿ ಸಾಲಗಳ ಸ್ಥಿರೀಕರಣ ನಿದಿಯಲ್ಲಿ ರೂ. 100.00 ಲಕ್ಷ ನಬಾರ್ಡ್ ಬಾಂಡ್ ಮತ್ತು ರೂ.50.00 ಲಕ್ಷ ಅಪೆಕ್ಸ್ ಬ್ಯಾಂಕಿನಲ್ಲಿ ಠೇವಣಿಯಾಗಿ ಹೂಡಿಕೆ ಮಾಡಲಾಗಿದೆ.

## 8)ಠೇವಣಿಗಳ ವಿವರ:-

ರೂ. ಲಕ್ಷಗಳಲ್ಲಿ

| ಠೇವಣಿ ವಿವರ | 31-03-2007ಕ್ಕೆ | 30-09-2008ಕ್ಕೆ |
|---|---|---|
| ಒಟ್ಟು ಠೇವಣಿ | 12555.47 | 12024.95 |
| ಈ ಪೈಕಿ ಹೆಚ್ಚಿನ ಬಡ್ಡಿ ದರ | 6250.21 | 7569.32 |
| ಕಡಿಮೆ ಬಡ್ಡಿ ದರ | 6305.26 | 4455.63 |

## 9)ಹೂಡಿಕೆಗಳು:-

ರೂ. ಲಕ್ಷಗಳಲ್ಲಿ

| ವಿವರಗಳು | ದಿನಾಂಕ:30-09-2008 ಕ್ಕೆ |
|---|---|
| ಶಾಸನ ಬದ್ಧ ಠೇವಣಿ ( ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ಠೇವಣಿ ಮಾಡಲಾಗಿದೆ.) | 3729.90 |
| ಶಾಸನ ಬದ್ಧವಲ್ಲದ ಠೇವಣಿ (ಇತರೆ ಠೇವಣಿಗಳು) | 2303.60 |
| **ಜುಮ್ಲಾ** | **6033.50** |

## 10)ಹೊರಗಿನಿಂದ ತಂದ ಸಾಲಗಳು (ನಬಾರ್ಡ್ ಹಾಗೂ ಅಪೆಕ್ಸ್ ಬ್ಯಾಂಕಿನಿಂದ)

ರೂ. ಲಕ್ಷಗಳಲ್ಲಿ

| ವಿವರಗಳು | ದಿನಾಂಕ:30-09-2008 ಕ್ಕೆ ಮೊಬಲಗು |
|---|---|
| ಕೃಷಿಸಾಲ | 8416.72 |
| ಕೃಷಿಯೇತರ ಸಾಲ | 185.10 |
| ಇತರೆ ಸಾಲ ( ಸ್ವ-ಸಹಾಯ ಸಂಘಗಳು) | 523.84 |
| **ಜುಮ್ಲಾ** | **9124.86** |

## 11) 2007-08 ನೇ ಸಾಲಿನಲ್ಲಿ ಸಾಲ ವಿವರ:-

ರೂ. ಲಕ್ಷಗಳಲ್ಲಿ

| ವಿವರಗಳು | 2007-08 ನೇ ಸಾಲಿನಲ್ಲಿ ವಿತರಿಸಿರುವ ಸಾಲ |
|---|---|
| **ಬೆಳೆಸಾಲ** | 9707.65 |
| ಮದ್ಯಮಾವದಿ ಸಾಲ(ಕೃಷಿ) | 1610.87 |
| ಸ್ವ-ಸಹಾಯ ಸಂಘಗಳಿಗೆ | 736.57 |
| ಕ್ಯಾಷ್ ಕ್ರೆಡಿಟ್ ಸಾಲ | 283.50 |
| ವ್ಯವಸಾಯೇತರಮದ್ಯಮಾವದಿ ಸಾಲ | 9.38 |
| ಅಲ್ಪಾವದಿ ಸಾಲ (Gold loan) | 1047.48 |
| **ಮನೆ ಸಾಲ** | |
| 1) ನೌಕರಿಗೆ | 6.50 |
| 2) ಇತರರಿಗೆ | |
| **ಜುಮ್ಲಾ** | 13401.95 |

ಅಭಿವೃದ್ದಿ ಕ್ರಿಯಾಯೋಜನೆಯಂತೆ 2008-09 ನೇ ಸಾಲಿಗೆ ರೂ.12600-00 ಲಕ್ಷ ಕೃಷಿ ಸಾಲ ಮತ್ತು 3600-00 ಲಕ್ಷಗಳ ಕೃಷಿಯೇತರ ಸಾಲ ಒಟ್ಟು 16200-00 ಲಕ್ಷಗಳ ಸಾಲನೀಡಿಕೆಯ ಗುರಿಯನ್ನು ಹೊಂದಾಲಾಗಿದೆ. 2008-09 ನೇ ಸಾಲಿನಲ್ಲಿ ಗುರಿಗನುಗುಣವಾಗಿ ಪ್ರಗತಿಯನ್ನು ಸಾಧಿಸಲು ಕಾರ್ಯಕ್ರಮ ಹಾಕಿಗೊಳ್ಳಲಾಗಿದೆ.

12) ಬ್ಯಾಂಕಿನ ಹೆಚ್ಚಿನ ವ್ಯವಹಾರವು ಕನ್ನಡದಲ್ಲಿಯೆ ನಡೆಯುತ್ತಿದ್ದು ಕನ್ನಡದ ಅನುಷ್ಠಾನ ಪ್ರಗತಿದಾಯಕವಾಗಿರುತ್ತದೆ.

## 13) ಸ್ವ-ಸಹಾಯ ಗುಂಪುಗಳ ವರ್ಷವಾರು ಪ್ರಗತಿ:-

ರೂ. ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಸಾಲು | ಒಟ್ಟು ಸ್ವಸಹಾಯ ಗುಂಪುಗಳ ರಚನೆ | ಗುಂಪುಗಳ ಉಳಿತಾಯ | ಒಟ್ಟು ಸ್ವಸಹಾಯ ಗುಂಪುಗಳ | | ಶೇಕಡ ವಸೂಲಾತಿ |
|---|---|---|---|---|---|---|
| | | | | ಜೋಡಣೆ ಸಂಖ್ಯೆ | ಮೋಬಲಗು | |
| 1 | 2005-06 | 293 | 22.84 | 702 | 327.20 | 94.51 % |
| 2 | 2006-07 | 599 | 30.50 | 680 | 379.72 | 95.01 % |
| 3 | 2007-08 | 528 | 28.17 | 1064 | 736.57 | 93.33 % |

**14) ಗಣಕೀಕರಣ:–** ಕೇಂದ್ರ ಕಛೇರಿ ಶಾಖೆಯು ಭಾಗಶಃ ಗಣಕೀಕರಣ ವಾಗಿದ್ದು ಕೇಂದ್ರ ಕಛೇರಿಯಲ್ಲೂ ಗಣಕೀಕರಣ ಪ್ರಗತಿಯಲ್ಲಿದೆ. ಬ್ಯಾಂಕಿನ ಎಲ್ಲಾ ಶಾಖೆಗಳನ್ನು ಗಣಕೀಕರಣ ಗೊಳಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

**15) ಠೇವಣಿ ಮತ್ತು ಸಾಲಗಳಿಗೆ ನೀಡುವ ಬಡ್ಡಿದರ:–**

| | ಠೇವಣಿಗಳ ಮೇಲೆ | ಬಡ್ಡಿ ದರ | | ಸಾಲಗಳ ಮೇಲೆ | |
|---|---|---|---|---|---|
| 1 | 15 ದಿನಗಳಿಂದ 45 ದಿನಗಳವರೆಗೆ | 5. % | | ಬೆಳೆಸಾಲ | |
| 2 | 46 ದಿನಗಳಿಂದ 90 ದಿನಗಳವರೆಗ | 5.50 % | 1 | ಬ್ಯಾಂಕಿನಿಂದ ಪ್ಯಾಕ್ಸ್ ಗಳಿಗೆ | 2 % |
| 3 | 91ದಿನಗಳಿಂದ 180 ದಿನಗಳವರೆಗ | 6.75 % | 2 | ಪ್ಯಾಕ್ಸ್ ನಿಂದ ಸಾಲಗಾರಿಗೆ | 4 % |
| 4 | 181ದಿನಗಳಿಂದ 364 ದಿನಗಳವರೆಗ | 8 % | 3 | ಸಿ.ಸಿ.ಸಾಲಗಳಿಗೆ | 13 % |
| 5 | 1 ವರ್ಷದಿಂದ 2 ವರ್ಷದೊಳಗೆ | 9.25 % | 4 | ಚಿನ್ನಾಭರಣ ಸಾಲ ಸಾಮಾನ್ಯ | 11 % |
| 6 | 2 ರಿಂದ 3 ವರ್ಷದೊಳಗೆ | 9 % | 5 | ಚಿನ್ನಾಭರಣ ಸಾಲ ಕೃಷಿಕರಿಗೆ | 10 % |
| 7 | 3 ವರ್ಷದ ಮೇಲ್ಪಟ್ಟು | 9 % | | | |

ಹಿರಿಯ ನಾಗರೀಕರಿಗೆ ಕನಿಷ್ಠ ಒಂದು ವರ್ಷಕ್ಕಿಂತ ಹೆಚ್ಚಿನ ಅವದಿಗೆ ರೂ. 5000-00 ಮೇಲ್ಪಟ್ಟ ಠೇವಣಿಗಳಿಗೆ ಶೇ. 0.50 % ಹೆಚ್ಚಿನ ಬಡ್ಡಿದರವನ್ನು ನೀಡಲಾಗುತ್ತಿದೆ. ಈ ಮೇಲಿನ ಬಡ್ಡಿ ದರಗಳು ಕಾಲಕಾಲಕ್ಕೆ ಬದಲಾವಣೆಯಾಗುತ್ತಿವೆ.

## 16) ಸಂಪರ್ಕಿಸಬೇಕಾದ ವಿವರ:-

1) ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ಪ್ರಧಾನ ಕಛೇರಿ, ಮೈಸೂರು.
**ದೂರವಾಣಿ ಸಂಖ್ಯೆ**:-0821-2520836
0821-2421047
ಫ್ಯಾಕ್ಸ್:-0821-2520836
E-mail :-mcdccb@rediffmail.com
ಯೋಜನೆ ಮತ್ತು ಅಭಿವೃದ್ಧಿ ವಿಭಾಗ

ವ್ಯವಸ್ಥಾಪಕ ನಿರ್ದೇಶಕರು